ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1846 (2210)
ಸದಸ್ಯರ ಹೆಸರು	:	ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾಗಿದ್ದ ದಿನಾಂಕ	:	31-03-2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಮಂಗಳೂರು ನಗರದಲ್ಲಿ ನಿರ್ಮಾಣಗೊಂಡ ಸ್ಮಾರ್ಟ್ ಸಿಟಿ ಅನ್ವಯ ನಿಲ್ದಾಣಗಳಿಗೆ ತಗುಲಿದ ವೆಚ್ಚ ಎಷ್ಟು; ಟೆಂಡರ್ ಯಾರಿಗೆ ನೀಡಲಾಗಿದೆ; ಎಲ್ಲಾ ನಿಲ್ದಾಣಗಳನ್ನು ನಿರ್ಮಿಸಲಾಗಿದೆಯೇ (ವಿವರ ನೀಡುವುದು)	**ಕೆಯುಐಡಿಎಫ್‌ಸಿ ವತಿಯಿಂದ:** ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ವತಿಯಿಂದ ಒಟ್ಟು 20 ಬಸ್‌ನಿಲ್ದಾಣಗಳನ್ನು 2 ಹಂತಗಳಲ್ಲಿ (ಹಂತ-1 ರಲ್ಲಿ 6 ಹಾಗೂ ಹಂತ-2 ರಲ್ಲಿ 14) ನಿರ್ಮಿಸಲಾಗಿದ್ದು, ಇವುಗಳಿಗೆ ಒಟ್ಟು ವೆಚ್ಚ ರೂ.2,91,16,813/- ಆಗಿರುತ್ತದೆ. ಹಂತ-1 ರ ಕಾಮಗಾರಿಗಳನ್ನು ಮೆ॥ ಇರ್ಯಾಮ್ ಸೈಂಟಿಫಿಕ್ ಸೊಲ್ಯೂಷನ್ ರವರಿಗೆ ಹಾಗೂ ಹಂತ-2 ರ ಕಾಮಗಾರಿಗಳನ್ನು ಮೆ॥ ಕಮಲ್ ಎನ್ ಫ್ಯಾಬ್ ರವರಿಗೆ ಟೆಂಡರ್ ಮೂಲಕ ನೀಡಲಾಗಿರುತ್ತದೆ. ಹಂತ-1 ರಲ್ಲಿ ಒಟ್ಟು 22 ಬಸ್ಸು ತಂಗುದಾಣಗಳಿಗೆ ಟೆಂಡರ್ ಕರೆಯಲಾಗಿದ್ದು, ಕೇವಲ 6 ಬಸ್ಸು ತಂಗುದಾಣದ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಅವುಗಳ ವಿವರ ಈ ಕೆಳಕಂಡಂತಿದೆ: 1. ಎನ್.ಐ.ಟಿ.ಕೆ ಸುರತ್ಕಲ್ 2. ವಿಷ್ಣುವಿಠೋಭ ಭಜನಾ ಮಂದಿರದ ಎದುರುಗಡೆ ಬೊಕ್ಕಪಟ್ಣ ಬೆಂಗ್ರೆ, ತಣ್ಣೀರುಬಾವಿ 3. ಸುರತ್ಕಲ್ (ಸ್ಮಶಾನದ ಹತ್ತಿರ) 4. ಮುಖ್ಯ ಜಂಕ್ಷನ್,ವಿಜಯ ಬ್ಯಾಂಕ್ ಎದುರುಗಡೆ, ಹೊಸಬೆಟ್ಟು 5. ಪಂಜಾಬ್ ನ್ಯಾಷನಲ್ ಬ್ಯಾಂಕ್ ಎದುರುಗಡೆ, ಹೊಸಬೆಟ್ಟು. 6. ಹೊನ್ನಕಟ್ಟೆ ಬಸ್ ಸ್ಟಾಪ್ ಹಂತ-2 ರಲ್ಲಿ ಒಟ್ಟು 24 ಬಸ್ಸು ತಂಗುದಾಣಗಳಿಗೆ ಟೆಂಡರ್ ಕರೆಯಲಾಗಿದ್ದು, ಕೇವಲ 14 ಬಸ್ಸು ತಂಗುದಾಣದ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಅವುಗಳ ವಿವರ ಈ ಕೆಳಕಂಡಂತಿದೆ: 1. ಶಕ್ತಿನಗರ, ಕನಡ್ಕ 2. ಸರ್ಕ್ಯೂಟ್ ಹೌಸ್, ಕದ್ರಿ ಹಿಲ್ಸ್ 3. ದೇವಿನಗರ, ಪಚ್ಚನಾಡಿ 4. ಕೆಲರಾಯಿ ಸರ್ಕಲ್, ನೀರುಮಾರ್ಗ 5. ಅಂಬಿಕಾನಗರ, ಕಾವೂರು 6. ಮಹಾಲಿಂಗೇಶ್ವರ ದೇವಸ್ಥಾನ ಹತ್ತಿರ, ಕಾವೂರು 7. ಮುಲ್ಲಕಾಡು, ಕಾವೂರು

		8. ಗುರ್ಜಿ ಸೆಂಟರ್, ಮಣ್ಣಗುಡ್ಡ 9. ಎನ್.ಎಮ್.ಪಿ.ಟಿ, NH 66 10. ಪದವು ಜಂಕ್ಷನ್, NH 66 11. ಆಶ್ರಯ ಕಾಲೋನಿ, ಪಚ್ಚನಾಡಿ 12. ರಾಯಿಕಟ್ಟೆ, ಕೂಳೂರು, ಕಾವೂರು ರಸ್ತೆ 13. ಸೈಂಟ್ ಆಗ್ನೇಸ್.ಬೆಂದೂರ್ 14. KIOCL ,NH 66 ಹಂತ-1 ಮತ್ತು ಹಂತ-2 ರ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.
ಆ)	ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿದೆಯೇ. ಇಲ್ಲದಿದ್ದಲ್ಲಿ ಕಾರಣಗಳೇನು; (ವಿವರ ನೀಡುವುದು)	ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 26 ಮಾರುಕಟ್ಟೆಗಳಿದ್ದು, ಈ ಪೈಕಿ 24 ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿವೆ. ಕೇಂದ್ರ ಮೀನು ಮತ್ತು ತರಕಾರಿ ಮಾರುಕಟ್ಟೆಯ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವ ಕಾರಣ ಸ್ಮಾರ್ಟ್ ಸಿಟಿ ಯೋಜನೆಯಡಿ ನವೀಕರಿಸುವ ನಿಟ್ಟಿನಲ್ಲಿ ವ್ಯಾಪಾರ ವಹಿವಾಟನ್ನು ಸ್ಥಗಿತಗೊಳಿಸಲಾಗಿದೆ. ಅಲ್ಲದೆ ಹಾಲಿ ವ್ಯಾಪಾರಿಗಳಿಗೆ ಈಗಾಗಲೇ ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಈ ಬಗ್ಗೆ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪೆಟಿಷನ್ 6725/2020 ಮತ್ತು ರಿಟ್ ಪೆಟಿಷನ್ 7015/2020 ರಂತೆ ದಾವೆಯು ಇತ್ಯರ್ಥಕ್ಕೆ ಬಾಕಿ ಇರುತ್ತದೆ.
ಇ)	ನಗರ ಪಾಲಿಕೆ ವ್ಯಾಪ್ತಿಯಲ್ಲಿ ಫುಟ್‌ಬಾಲ್ ಗ್ರೌಂಡ್‌ಗೆ 'ಟರ್ಫ್' ಅಳವಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಫುಟ್‌ಬಾಲ್ ಗ್ರೌಂಡ್‌ಗೆ 'ಟರ್ಫ್' ಅಳವಡಿಸಲು ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ನಅಇ 168 ಸಿಎಸ್ಎಸ್ 2020

(ಬಿ.ಎ.ಬಸವರಾಜ)
ಮಾನ್ಯ ನಗರಾಭಿವೃದ್ಧಿ ಸಚಿವರು.